# ಅಟೆನ್ಷನ್ ಪ್ಲೀಸ್...

ಮನೆಮಂದಿಯೆಲ್ಲ ಗೃಹಬಂಧನಕ್ಕೊಳಗಾಗಿರುವ ಸಂದರ್ಭದಲ್ಲಿ ವಿಶ್ವ ಚಲನೆಯನ್ನು ಮರೆತಂತೆ ಕಾಣಿಸುತ್ತಿದೆ. ಆದರೆ, ಯಾವುದೋ ಮೂಲೆಯಲ್ಲಿ ಯಾರೋ ಒಬ್ಬರು ಈ ಹೊತ್ತಿನ ಆತಂಕವನ್ನು ಮರೆತು ಯಾವುದೋ ಚಟುವಟಿಕೆಯಲ್ಲಿ ತೊಡಗಿರುತ್ತಾರೆ. ಅನ್ನದ ಆತಂಕ, ವಿಪರೀತ ಹುಮ್ಮಸ್ಸು, ಸೃಜನಶೀಲತೆಯ ಬಿಸುಪು, ಬುಗ್ಗೆಯಾದ ಸಂಭ್ರಮ, ಹೀಗೆ ಯಾವುದೋ ಭಾವ–ಬಣ್ಣ ಸೃಜನಶೀಲತೆಯ ಅಭಿವ್ಯಕ್ತಿಗೆ ಪ್ರೇರಣೆಯಾಗುತ್ತದೆ; ಜನರನ್ನು ಮನೆಗಳಿಂದ ಹೊರಬೀಳಲು ಪ್ರೇರೇಪಿಸುತ್ತದೆ. ಕೊರೊನಾ ಸಂದರ್ಭದ ಇಲ್ಲಿನ ಚಿತ್ರಪಟಗಳು ಬದುಕಿನ ಹಲವು ಬಣ್ಣಗಳನ್ನು ಬಿಂಬಿಸುವುದರ ಜೊತೆಗೆ, ನಾಳೆಗಳ ಬಗ್ಗೆ ನಿರೀಕ್ಷೆಗಳನ್ನು ಹುಟ್ಟಿಸುವಂತೆಯೂ ಕಾಣಿಸುತ್ತವೆ.



### ಕೊರೊನಾ ಕಾಲದ ಮುಖಗವುಸು

ಮಾರ್ಸಿಯೊ ರೊಡ್ರಿಗಸ್ ಬ್ರೆಜಿಲ್‌ನ ಫ್ಯಾಷನ್ ಫೋಟೊಗ್ರಫರ್. ಕೊರೊನೊ ವೈರಾಣು ಭೀತಿಯ ಹಿನ್ನೆಲೆಯಲ್ಲಿ ಹೇರಲಾಗಿರುವ ನಿರ್ಬಂಧಗಳ ಹಿನ್ನೆಲೆಯಲ್ಲಿ ಗಾರ್ಬೆಜ್ ಐಟಂಗಳನ್ನು ಸಂಗ್ರಹಿಸಬೇಕಾದ ಪೌರ ಕಾರ್ಮಿಕರಿಗೆ ತಮ್ಮ ಕರ್ತವ್ಯ ನಿರ್ವಹಿಸುವುದು ಸಾಧ್ಯವಾಗುತ್ತಿಲ್ಲ. ಇದರಿಂದ ಬೇಸತ್ತಿರುವ ಮಾರ್ಸಿಯೊ, ಬಳಸಿದ ಬಾಟಲ್‌ಗಳು, ಕ್ಯಾನ್‌ಗಳು, ಬಾಕ್ಸ್‌ಗಳನ್ನು ಬಳಸಿ ಮುಖ ಕವಚ ರೂಪಿಸಿಕೊಂಡು ಧರಿಸಿದ್ದಾನೆ.



### ಇವನೆ ನೋಡು ಅನ್ನದಾತ...

ಎಂಥ ಬಿಕ್ಕಟ್ಟಿನ ಸಂದರ್ಭದಲ್ಲೂ ರೈತರು ಮನೆಯಲ್ಲಿ ಕೂತರೆ ದೇಶ ಮುಂದಕ್ಕೆ ಸಾಗೀತೆ? ರೈತರು ತಮ್ಮ ಹೊಲಗಳಲ್ಲಿನ ತರಕಾರಿಗಳನ್ನು ಪಟ್ನಾದ ಮಾರುಕಟ್ಟೆಗೆ ಸಾಗಿಸುತ್ತಿರುವ ಈ ದೃಶ್ಯ ರೈತರ ಮಹತ್ವ ಮತ್ತು ಅವರ ಅಸಹಾಯಕತೆ ಎರಡನ್ನೂ ಸೂಚಿಸುವಂತಿದೆ.